ನಿರ್ದೇಶನಾಲಯ ಸಹಾಯ ವಾಣಿ 14499' ಈ ಮಾಹಿತಿಯನ್ನು ಕಡ್ಡಾಯವಾಗಿ ಪ್ರದರ್ಶಿಸತಕ್ಕದ್ದು ಎಂದು ಸರ್ಕಾರ ಆದೇಶ ಹೊರಡಿಸಬೇಕು.

- ಎಲ್ಲ ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಸ್ಥಳೀಯ ಆಡಳಿತ ತಮ್ಮ ತಮ್ಮ ವಾರ್ಡ್‌ಗಳ ಮಟ್ಟದಲ್ಲಿ ಇರುವ ವಿವಿಧ ವಯೋಮಾನದ ಮಕ್ಕಳ ಅಂಕಿಸಂಖ್ಯೆಗಳನ್ನು ಸಿದ್ಧಪಡಿಸಬೇಕು. ಇದಕ್ಕೆ ಅಂಗನವಾಡಿ, ಶಾಲೆ ಮತ್ತು ಸ್ಥಳೀಯ ಆರೋಗ್ಯ ಇಲಾಖೆಯ ಸಿಬ್ಬಂದಿಗಳು ಸಹಾಯ ಮಾಡಬೇಕು. ಇಂತಹದೊಂದು ವಿವರವಾದ ಮಾಹಿತಿಯನ್ನು ಸಂಬಂಧಿಸಿದ ಆಡಳಿತ ಇಲಾಖೆಯವರಿಗೆ ಮಾತ್ರ ಪರಿಶೀಲಿಸಲು ಅವಕಾಶವಿದ್ದು, ಯಾರಾದರೂ ಮಕ್ಕಳು ಕೋವಿಡ್ ಅಥವಾ ಇನ್ನಿತರ ಅನಾರೋಗ್ಯ ಪೀಡಿತರಾದರೆ ಅಥವಾ ಅನಾಥರಾದಲ್ಲಿ / ಅರೆ ಅನಾಥರಾದಲ್ಲಿ ಅವರ ಆರೋಗ್ಯ, ರಕ್ಷಣೆ, ಶಿಕ್ಷಣ ಒಳಗೊಂಡ ಪುನರ್ವಸತಿಗೆ ಅನುಸರಣೆ ಮಾಡಲು ಈ ಮಾಹಿತಿ ಬಳಸಬೇಕು.
- ಯಾವುದಾದರೂ ಕುಟುಂಬದಲ್ಲಿ ಪೋಷಕರಿಬ್ಬರೂ ಅಥವಾ ಆ ಇಬ್ಬರಲ್ಲಿ ಒಬ್ಬರು ಆಸ್ಪತ್ರೆಯಲ್ಲಿರುವಂತಹ ಪ್ರಕರಣಗಳು ಕಂಡುಬಂದರೆ ಅಂತಹ ಮಕ್ಕಳಿಗೆ ಬೇಕಾದ ಆಹಾರ ಸೌಲಭ್ಯಗಳನ್ನು, ರಕ್ಷಣೆಯ ಭರವಸೆಯನ್ನು ಕೊಡುವಂತಹ ವ್ಯವಸ್ಥೆಗಳನ್ನು ಏರ್ಪಡಿಸಬೇಕು.
- ಯಾವುದೇ ಸಂದರ್ಭದಲ್ಲೂ ಕೊರೊನಾದ ಸೋಂಕಿನ ಭಯವಿದ್ದರೂ, ಮಕ್ಕಳು ತಾರತಮ್ಯ ಮತ್ತು ನಿರ್ಲಕ್ಷ್ಯಕ್ಕೆ ಈಡಾಗುವುದು, ಅವರನ್ನು ಕುರಿತು ಅಸಹ್ಯ ಪಡುವುದು ಇಂತಹ ನಡವಳಿಕೆಗಳನ್ನು ಯಾರೂ ಮಾಡದಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕು.
- ಅಕಸ್ಮಾತ್ ಯಾವುದಾದರೂ ಮಗು ಕುಟುಂಬದ ಪರಿಧಿಯಿಂದ ಹೊರಬಿದ್ದು ಬೀದಿಗೆ ಬಂದರೆ, ತನ್ನ ಮೂಲ ನೆಲೆಯಿಂದ ತಪ್ಪಿಹೋದರೆ, ಅಂಥ ಮಗುವನ್ನು ಹುಡುಕುವ ಮತ್ತು ಮೂಲ ನೆಲೆಗೆ ಕರೆತರುವ ವ್ಯವಸ್ಥೆಯನ್ನು ಮಾಡಬೇಕು. ಇದಕ್ಕೆ 'ಆಧಾರ್' ಸಂಖ್ಯೆ ಮೂಲಕ ಹುಡುಕುವ ವ್ಯವಸ್ಥೆಯನ್ನು ಜಿಲ್ಲಾ ಮಕ್ಕಳ ಸಂರಕ್ಷಣಾ ಘಟಕಗಳು, ಮಕ್ಕಳ ಕಲ್ಯಾಣ ಸಮಿತಿಗಳು, ಚೈಲ್ಡ್‌ಲೈನ್ 1098 ಹಾಗೂ ಪೊಲೀಸ್ ಸಿಬ್ಬಂದಿ ಬಳಸುವಂತಾಗಬೇಕು.
- ಮಕ್ಕಳನ್ನು ಮಕ್ಕಳ ಪಾಲನಾ ನಿಲಯಗಳಲ್ಲಿ ಇರಿಸುವುದನ್ನು ಸರ್ಕಾರ ಮತ್ತು ಸಮುದಾಯಗಳು ಆದಷ್ಟೂ ಕಡಿಮೆ ಮಾಡಬೇಕು. ನಿಲಯಗಳೇನಿದ್ದರೂ ತುರ್ತಿನ ಪರಿಸ್ಥಿತಿಗಳಲ್ಲಿ ತಾತ್ಕಾಲಿಕ ರಕ್ಷಣಾ ವ್ಯವಸ್ಥೆಗಳಾಗಬೇಕು. ಮಕ್ಕಳನ್ನು ಅವರವರ ಬಂಧುಗಳೊಡನೆ ಬೆಳೆಯಲು ಅವಕಾಶಗಳನ್ನು ಕಲ್ಪಿಸಬೇಕು.
- ಬಂಧುಬಳಗದವರು ಯಾರೂ ಇಲ್ಲದಿದ್ದಲ್ಲಿ ಅಂತಹ ಮಕ್ಕಳನ್ನು ತಾತ್ಕಾಲಿಕವಾಗಿ ನೋಡಿಕೊಳ್ಳಲು/ ಸಾಕಿಕೊಳ್ಳಲು ಫಾಸ್ಟರ್ ಕೇರ್ ಸೌಲಭ್ಯ ಕೊಡಬಲ್ಲ ಸ್ವಯಂಸೇವಾ ಸಂಸ್ಥೆಗಳು ಕುಟುಂಬಗಳನ್ನು ಗುರುತಿಸಿ ಅವರಿಗೆ ತರಬೇತಿ ಕೊಡಬೇಕಿದೆ.



**‘ ಮಕ್ಕಳು ಕೆಲಸ ಮಾಡಲಿ ಬಿಡಿ ಎನ್ನುವ ಮನೋಭಾವ ಸಮುದಾಯಗಳಲ್ಲಿ ಸಹಾನುಭೂತಿ ಮತ್ತು ಅನಿವಾರ್ಯ ಎನ್ನುವ ಧೋರಣೆಯಲ್ಲಿ ಬೆರೆತು ಹೋದರೆ ನಾವು ಮತ್ತೆ ಮಕ್ಕಳ ಹಕ್ಕುಗಳು, ಮಕ್ಕಳ ರಕ್ಷಣೆ, ಶಿಕ್ಷಣ ಎನ್ನುವುದನ್ನು ಜಾರಿ ಮಾಡಲು ಇನ್ನೊಂದೆರಡು ದಶಕಗಳ ಆಂದೋಲನ ಮಾಡಬೇಕಾದೀತು**

**-ರಾಘವೇಂದ್ರ,** ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ

- ಮಕ್ಕಳು ಅರೆ ಅನಾಥರಾದಲ್ಲಿ ಅಥವಾ ಅನಾಥರಾದಲ್ಲಿ ಅವರಿಗೆ ಅಗತ್ಯವಿರುವ ಮಾನಸಿಕ ಆಪ್ತ ಸಮಾಲೋಚನೆ ಸಹಾಯ, ಆಹಾರ, ಔಷಧಿ, ಶಿಕ್ಷಣಕ್ಕೆ ನೆರವು, ವಸತಿ ಕಲ್ಪಿಸುವುದೇ ಮೊದಲಾದವುಗಳನ್ನು ನಿರ್ವಹಿಸಲು ಸಮಾಜಕಾರ್ಯಕರ್ತರ ದೊಡ್ಡ ಪಡೆ ಸೃಷ್ಟಿಯಾಗಬೇಕಿದೆ.
- ಗ್ರಾಮಪಂಚಾಯತಿಗಳ ವ್ಯಾಪ್ತಿಯಲ್ಲಿ ಸ್ಥಾಪಿತವಾಗಿರುವ ಕೋವಿಡ್ ಕಾರ್ಯಪಡೆ / ಟಾಸ್ಕ್‌ಫೋರ್ಸ್‌ಗಳು ವಿವಿಧ ಸಮಿತಿಗಳನ್ನು ಒಳಗೊಂಡು ಮಕ್ಕಳ ರಕ್ಷಣೆಗಾಗಿ ತಕ್ಷಣವೇ ಕ್ರಿಯಾಯೋಜನೆಗಳನ್ನು ನಿರ್ಮಿಸಿ ಕಾರ್ಯಪ್ರವೃತ್ತರಾಗಬೇಕು.

## ತಿರುವಿನಾಚೆ ಏನು ಕಾದಿದೆಯೊ?

ನಾವೀಗ ಹೋರಾಡುತ್ತಿರುವುದು ಸಮಸ್ಯೆಯ ಒಂದು ಮುಖದೊಟ್ಟಿಗೆ ಮಾತ್ರ. ಇದಕ್ಕಿರುವುದು ನೂರಾರು ಮುಖಗಳು. ಈಗ ಕೆಲವು ಗಹಗಹಿಸಿ ನಗುತ್ತ ತಮ್ಮ ವಿಕೃತರೂಪ ತೋರಿಸುತ್ತಿದ್ದರೆ, ಇನ್ನೂ ಹೆಡೆಯೆತ್ತಲಿರುವ ಆಯಾಮಗಳೂ ಸಾಕಷ್ಟಿವೆ. ಈ ಕೋವಿಡ್ ಸಾಂಕ್ರಾಮಿಕ ತಹಬದಿಗೆ ಬಂದ ಮೇಲೆ ಜಗತ್ತು, ಜನಜೀವನ, ಅದರಲ್ಲೂ ಮಕ್ಕಳ ಬದುಕು ಹೇಗಿರುತ್ತದೆ, ಹೇಗಿರಬೇಕು ಮತ್ತು ಅದಕ್ಕಾಗಿ ಸರ್ಕಾರಗಳು ಮತ್ತು ಸಮುದಾಯಗಳು ಏನು ಮಾಡಬೇಕು? ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವುದು ಹೋಗಲಿ, ಪ್ರಶ್ನೆಗಳನ್ನೇ ಗಟ್ಟಿಯಾಗಿ ಕೇಳಿಕೊಳ್ಳಲಾಗದ ಅಸಹಾಯಕ ಪರಿಸ್ಥಿತಿಯಲ್ಲಿ ನಾವಿದ್ದೇವೆ.

ಜಾತಿ, ಧರ್ಮ, ರಾಜಕೀಯ ಪ್ರತಿನಿಧಿತ್ವ, ಶಿಕ್ಷಣ, ಉದ್ಯೋಗಾವಕಾಶಗಳು, ಆರ್ಥಿಕ ಹಿನ್ನೆಲೆಯಿಂದ ವಿಪರೀತವಾಗಿ ಶ್ರೇಣೀಕೃತವಾದ ಭಾರತದಲ್ಲಿ ಹಿಂದುಳಿದ ಸಮುದಾಯಗಳ ಮಕ್ಕಳು ಅವಕಾಶಗಳಿಲ್ಲದ ಪರಿಸರದಲ್ಲಿ ಹುಟ್ಟಿ ವಿವಿಧ ರೀತಿಯ ತಾರತಮ್ಯಗಳಿಗೀಡಾಗುತ್ತಲೇ ಬೆಳೆಯುತ್ತಾರೆ. ಕೋವಿಡ್ ಹಾವಳಿಗೀಡಾಗಿ ಮರಣ ಹೊಂದುತ್ತಿರುವವರ ಸಂಖ್ಯೆ ಈಗ ಮೂರು ಲಕ್ಷದ ಹತ್ತಿರ ಬರುತ್ತಿದೆ. ಈಗ ಅತ್ಯಂತ ಕನಿಷ್ಠ ಮಟ್ಟದ ಆರೋಗ್ಯ ವ್ಯವಸ್ಥೆಯಿರುವ ಗ್ರಾಮೀಣ ಪ್ರದೇಶಗಳಲ್ಲಿ, ಬಡ ಸಮುದಾಯಗಳ ಮಧ್ಯದಲ್ಲಿ ಕೋವಿಡ್ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಜನರನ್ನು ಬಲಿ ತೆಗೆದುಕೊಳ್ಳುವ ಅನುಮಾನವಿದೆ. ಅದರಿಂದಾಗಿ ಇನ್ನಷ್ಟು ಕುಟುಂಬಗಳು, ಮಕ್ಕಳು ಬಡತನದ ಅಂಚಿಗೆ ಬೀಳುವುದಂತೂ ಖಂಡಿತ. ಈ ಹಿಂದೆ ಮನುಕುಲ ವಿವಿಧ ರೀತಿಯ ವೈಪರೀತ್ಯಗಳನ್ನು ಎದುರಿಸಿದ ನಂತರ ಮತ್ತೆ ಸಂಘಟಿತರಾಗುವ ಪ್ರಕ್ರಿಯೆಯಲ್ಲಿ ಅವಕಾಶ ವಂಚಿತರು ಇನ್ನಷ್ಟು ಮತ್ತಷ್ಟು ಹಿಂದಕ್ಕೆ ಬೀಳುತ್ತಿದ್ದರು ಎನ್ನುವುದನ್ನು ಚರಿತ್ರೆ ದಾಖಲಿಸಿದೆ. ನಾವು ಮತ್ತೆ ಅಂತಹದೇ ಪರಿಸ್ಥಿತಿಗೆ ಬೀಳದಂತೆ ಅದರಲ್ಲೂ ಮಕ್ಕಳು ದಿಕ್ಕೆಡದಂತೆ ಕಾಪಿಟ್ಟುಕೊಳ್ಳುವ ಸವಾಲು ಈಗ ನಮ್ಮೆದುರಿದೆ.

ಮಕ್ಕಳ ಬದುಕು, ರಕ್ಷಣೆ, ಶಿಕ್ಷಣ, ಪೋಷಣೆ, ಆರೈಕೆ ಎಲ್ಲದರಲ್ಲೂ ಹೊಸ ದೃಷ್ಟಿಕೋನದಲ್ಲಿ ನೀತಿ ನಿಯಮಗಳನ್ನು ರಚಿಸಬೇಕಾದ ಅವಶ್ಯಕತೆ ಈಗ ಅನಿವಾರ್ಯವಾಗಿದೆ. ಇಂತಹ ನೀತಿ ಮುಖ್ಯವಾಗಿ ಮೂಲೆಗುಂಪಾಗಿರುವ, ಹಿಂದುಳಿದಿರುವ, ಅವಕಾಶಗಳಿಂದ ವಂಚಿತರಾಗಿರುವ ಮಕ್ಕಳಿಗೆ ಆದ್ಯತೆಯಿಂದ ದೊರಕುವಂತಹ ವ್ಯವಸ್ಥೆಗಳನ್ನು ತರಲೇಬೇಕಿದೆ. ಅಂತಹ ಸಮಾಜದ ನಿರ್ಮಾಣಕ್ಕಾಗಿ ಸರ್ಕಾರಗಳು ಸಂಪನ್ಮೂಲಗಳನ್ನು, ಗುಣಮಟ್ಟದ ಸೇವೆಗಳನ್ನು ಹೂಡಲು ಮುಂದಾಗಬೇಕಿದೆ.

ಸಮಾಜ ಬಹುತೇಕ ಸ್ವಸ್ಥವಾಗಿದ್ದಾಗಲೇ ಇಷ್ಟೊಂದು ಅನಾಥ ಮಕ್ಕಳು ನಮ್ಮ ನಡುವೆ ಇದ್ದರು; ಅವರು ಅಪರಾಧ, ದುಷ್ಟಗಳಿಗೆ ಬಲಿಯಾಗುವುದನ್ನು ಕಾಣುತ್ತಿದ್ದೆವು. ಈಗಂತೂ ನಮ್ಮ ಅಂದಾಜುಗಳನ್ನು ಚಿಂದಿಗೊಳಿಸಿ, ನಮ್ಮ ನಿಭಾವಣಾ ಸಾಮರ್ಥ್ಯಕ್ಕೆ ಸವಾಲಾಗುವಂತೆ ಅನಾಥ ಮಕ್ಕಳ ಪೀಳಿಗೆಯೇ ರೂಪುಗೊಳ್ಳುತ್ತಿದೆ. ಅವರನ್ನು ಸ್ವಸ್ಥವಾಗಿ ಬೆಳೆಸಲು ಒಂದು ಸಮಾಜವಾಗಿ ನಾವು ಸಮರ್ಥರಿದ್ದೇವೆಯೇ? ಸಿದ್ಧರಿದ್ದೇವೆಯೇ? ಒಂದೊಮ್ಮೆ ಇದರಲ್ಲಿ ನಾವು ವಿಫಲರಾದರೆ ಆ ಅನಾಥಮಕ್ಕಳು ಏನಾಗಬಹುದು?

ಈ ಪ್ರಶ್ನೆಗೆ ಉತ್ತರಕೊಡುವುದು ಈ ಕ್ಷಣದಲ್ಲಿಯಂತೂ ಕಷ್ಟವೇ. ಆದರೆ ಅನಾಥಗೊಂಡಿರುವ ಆ ಮಕ್ಕಳನ್ನು ಇಡೀ ಸಮಾಜ ಅಮ್ಮನಾಗಿ ಮಡಿಲಲ್ಲಿ ಕಾಪಿಟ್ಟುಕೊಳ್ಳದೆ ಹೋದರೆ, ಅವರು ಮಗ್ಗುಲ ಮುಳ್ಳಾಗಿ ಕಾಡುವ ಸಾಧ್ಯತೆಯಂತೂ ಇದೆ.

ಪ್ರತಿಕ್ರಿಯಿಸಿ: feedback@sudha.co.in

